**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 25-03-2024.**

**ಪಾಟೀ ಸವಾಲು - 12 ನೇ ಪ್ರತಿವಾದಿ ಪರ ವಕೀಲರಿಂದ :**

**1)** ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿರುತ್ತೇನೆ. ನಾನು ಪವರ್ ಲೂಮ್ಸ್ ಕೆಲಸ ಮಾಡುತ್ತೇನೆ. ದಾವಾ ಸ್ವತ್ತುಗಳು ನಮ್ಮ ತಾಯಿಯ ಪಿತ್ರಾರ್ಜಿತ ಆಸ್ತಿಗಳು. ನಮ್ಮ ತಾಯಿ ಮರಣ ಹೊಂದಿರುತ್ತಾರೆ. ಅವರು 2020 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ಅವರು ದಿ.13-08-2020 ರಂದು ಮರಣ ಹೊಂದಿರುತ್ತಾರೆ. ನಾನು ಪ್ರಶ್ನಿಸಿರುವ ದಿ.15-06-2017 ರ ಕ್ರಯಪತ್ರಕ್ಕೆ ನಮ್ಮ ತಾಯಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ದಾವೆ ದಾಖಲಿಸುವ ಪೂರ್ವದಲ್ಲಿ ನಮ್ಮ ತಾಯಿ ಆಸ್ತಿಯಲ್ಲಿ ಭಾಗ ಕೇಳಿ ದಾವೆ ದಾಖಲಿಸಿರುವುದಿಲ್ಲ. ನಮ್ಮ ತಂದೆಯ ಕಡೆ ಕುಟುಂಬದವರು ಅನುಕೂಲಸ್ಥರು ಎಂದರೆ ಸರಿಯಲ್ಲ. ನಮ್ಮ ತಾಯಿ ಜೀವಂತವಿರುವಾಗ ಆಸ್ತಿಯಲ್ಲಿ ಯಾವತ್ತೂ ಭಾಗ ಕೇಳಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಯನ್ನು ಮದುವೆ ಮಾಡಿ ಕೊಡುವಾಗ ಅವರ ತಂದೆ ತಾಯಿ ಹಾಗೂ ಉಳಿದ ಕುಟುಂಬದ ಸದಸ್ಯರು ಚೆನ್ನಾಗಿ ಮದುವೆ ಮಾಡಿ ಕೊಟ್ಟು ಕೊಡಬೇಕಾದದ್ದನ್ನೆಲ್ಲಾ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ಕೆಲಸ ಮಾಡುವ ಮಗ್ಗ ಬೇರೆಯವರದ್ದು. ನಾನು ಅಲ್ಲಿ ಕೂಲಿ ಕೆಲಸ ಮಾಡುತ್ತೇನೆ. ನಮ್ಮ ತಾಯಿಯ ತಂದೆಯ ಮನೆಯವರು ಆಸ್ತಿಗಳನ್ನು ನಮ್ಮ ತಾಯಿಯ ಜೀವಿತಾವಧಿಯಲ್ಲೇ ಮಾರಾಟ ಮಾಡಿದ್ದರು ಎಂದರೆ ಸರಿ. ನಮ್ಮ ತಾಯಿ ಯಾವತ್ತೂ ಸಹ ಸದರಿ ಕ್ರಯಪತ್ರವನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ 2 ನೇ ಪ್ರತಿವಾದಿಯನ್ನು ಆ ಬಗ್ಗೆ ಪ್ರಶ್ನಿಸಿದ್ದರು. ನಮ್ಮ ತಾಯಿ ಯಾವುದೇ ಭಾಗ ಕೇಳಿ ಅವರನ್ನು ಪ್ರಶ್ನಿಸಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಮತ್ತು ಅವರ ತಂದೆಯ ಮನೆಯ ಸಂಬಂಧ ತುಂಬಾ ಚೆನ್ನಾಗಿತ್ತು, ಆ ಕಾರಣದಿಂದ ಅವರು ಪ್ರಶ್ನಿಸಿರುವುದಿಲ್ಲ ಹಾಗೂ ನಾನು ಇಲ್ಲಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಾಯಿಗೆ ಅವರ ತಂದೆಯ ಮನೆಯ ಆಸ್ತಿಯಲ್ಲಿ ಭಾಗ ಕೇಳುವ ಉದ್ದೇಶ ಇದ್ದರೇ ಅವರ ಜೀವಿತಾವಧಿಯಲ್ಲೇ ದಾವೆ ದಾಖಲಿಸುತ್ತಿದ್ದರು ಎಂದರೆ ಅವರಿಗೆ ಅಷ್ಟು ಅನುಭವ ಇರಲಿಲ್ಲ ಎಂದು ನುಡಿಯುತ್ತೇನೆ. ನಮ್ಮ ತಾಯಿ ಮರಣ ಹೊಂದಿರುವುದರಿಂದ ದುರುದ್ದೇಶಪೂರ್ವಕವಾಗಿ ನಾನು ಈ ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಕ್ರಯಪತ್ರ ಆಗಿರುವ ಬಗ್ಗೆ ನನ್ನ ಗಮನಕ್ಕೆ 2015 ನೇ ಇಸವಿಯಲ್ಲಿ ಬಂದಿರುತ್ತದೆ. ಆದ ಕಾರಣ ನಮ್ಮ ತಾಯಿಯ ಜೀವಿತಾವಧಿಯಲ್ಲೇ ಆ ಬಗ್ಗೆ ದಾವೆಯನ್ನು ದಾಖಲಿಸಬಹುದಿತ್ತು ಎಂದರೆ 2 ನೇ ಪ್ರತಿವಾದಿ ಪಾಲು ಕೊಡುತ್ತೇನೆ ಎಂದು ಹೇಳುತ್ತಾ ಬಂದಿದ್ದರು ಎಂದು ನುಡಿಯುತ್ತೇನೆ. ನಮ್ಮ ತಾಯಿಗೆ ಭಾಗ ಕೇಳುವ ಉದ್ದೇಶ ಇರಲಿಲ್ಲ, ಆದ ಕಾರಣ ಅವರು ಮರಣ ಹೊಂದುವವರೆಗೆ ಕಾದು ಈ ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**(1 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಾಗಿದ್ದು, ಅವರ ಪರ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**